BiSEP Sanction Order

YENEPOYA

English Translated Abstract

## Proceedings of Karnataka Government

**Subject:** Extension of BTFS programme as BiSep in the second cycle for Biotechnology Skill Enhancement in the state of Karnataka

**References:**

1. Government order No: ITD 58 MDA 2008, dated 18.07.2009
2. Government order No: ITD 01 MDA 2010, dated 04.12.2010
3. Government order No: ITD 10 MDA 2016, dated 21.06.2016
4. Executive Director, KBITS letter No: KBITS/02/BFC/2016-17/250 dated 09.02.2017

**Abstract of the order**

***************************

With respect to the reference No. 3 cited above, as per the order of BiSep selection committee, 18 institutions recognized for BiSep are as listed in the table below for providing job-oriented skill training in the upcoming domains such as Biotherapeutics/ Pharmaceuticals product development, crop genetics and seed technology, Multiomics Technology, Bioinformatics and Rational Drug Design, Cellular and Molecular Diagnostics, Fermentation and Bioprocessing, Fermentation and Microbial Technology, Nutraceuticals and Food Processsing, Clinical Research and Statistical Analysis, Protein Expression and Scale-up etc.

**Table-1:**

| Sl. No. | University/Institution name | Place |
|---|---|---|
| 1. | Gulbarga University | Kalburgi |
| 2. | J.S.S. College of Arts, Science and Commerce | Mysuru |
| 3. | Manipal University | Manipal |
| 4. | Siddaganga Institute of Technology | Tumkuru |
| 5. | St. Aloysius College | Mangaluru |
| 6. | Dayananda Sagar College of Engineering | Bengaluru |
| 7. | Maharani Lakshmi Ammanni College for Women | Bengaluru |
| 8. | Padmashree Institute of Management and Sciences | Bengaluru |
| 9. | PES University | Bengaluru |
| 10. | The Oxford College of Science | Dharwad |
| 11. | SDM College of Medical Sciences and Hospital | Dharwad |

Registrar
Yenepoya (Deemed to be University)
University Road, Deralakatte
Mangalore 575 018

ATTESTED
Dr.Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

| | | |
|---|---|---|
| 12. | Shri Dharmasthala Manjunatheshwara College | Ujire, D. K. |
| 13. | University of Agricultural Sciences | Dharwad |
| 14. | Yenepoya University | Mangaluru |
| 15. | M. S. Ramaiah Institute of Technology | Bengaluru |
| 16. | Mount Carmel College | Bengaluru |
| 17. | Basaweshwara Engineering College | Bagalkot |
| 18. | KLE's B.V. Bhoomaraddi College of Engineering and Tech. | Hubballi |

Under the presidentship of former president of Ministry of IT/BT and S & T, selection committee, in the resolution of the meeting dated 31.01.2017, has selected 7 institutions for providing Rs. 100 lakhs as a one-time non-recurring grant. All the 18 institutions will be granted Rs. 10 lakhs per year towards recurring cost for a period of 5 years. Also, 50% of the maximum course fee of Rs. 50,000 is provided as a fixed concession for 10 resident Karnataka students among the total student strength of 20 per institution, for all the 18 institutions, as per the table listed below:

**Table-4:**

| Sl. No. | University/Institution name | Amount for non-recurring item (In lakhs) | Consumable grant sanctioned for recurring items not exceeding 10 lakhs for 5 years | 50% of the course fee for a maximum of 10 students @ 25000 per student | Total (In lakhs) |
|---|---|---|---|---|---|
| | | Year 1 | From year 1-5 | From year 1-5 | |
| 1. | Basaveshwara Engineering College, Bagalkot | 100.00 | 50.00 | 12.50 | 162.50 |
| 2. | KLE's B.V. Bhoomaraddi College of Engineering and Technology, Hubballi | 100.00 | 50.00 | 12.50 | 162.50 |
| 3. | M.S. Ramaiah Institute of Technology, Bengaluru | 100.00 | 50.00 | 12.50 | 162.50 |
| 4. | Mount Carmel College, Bengaluru | 100.00 | 50.00 | 12.50 | 162.50 |
| 5. | SDM College of | 100.00 | 50.00 | 12.50 | 162.50 |

ATTESTED

Registrar
Yenepoya (Deemed to be University)
University Road, Deralakatte
Mangalore - 575 018

Dr.Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

| | | | | | |
|---|---|---|---|---|---|
| | Medical Sciences and Hospital, Dharwad | | | | |
| 6. | Shri Dharmasthala Manjunatheshwara College, Ujire, D.K. | 100.00 | 50.00 | 12.50 | 162.50 |
| 7. | Yenepoya University, Mangaluru | 100.00 | 50.00 | 12.50 | 162.50 |
| 8. | Institute of Agriculture Biotechnology, University of Agricultural Sciences, Dharwad | 0.00 | 50.00 | 12.50 | 62.50 |
| 9. | Dayanada Sagar College of Engineering, Bengaluru | 0.00 | 50.00 | 12.50 | 62.50 |
| 10. | Gulbarga University, Kalburgi | 0.00 | 50.00 | 12.50 | 62.50 |
| 11. | J.S.S. College of Arts, Science and Commerce, Mysuru | 0.00 | 50.00 | 12.50 | 62.50 |
| 12. | Maharani Lakshmi Ammanni College for Women, Bengaluru | 0.00 | 50.00 | 12.50 | 62.50 |
| 13. | School of Life Sciences, Manipal University, Manipal, Udupi | 0.00 | 50.00 | 12.50 | 62.50 |
| 14. | Padmashree Institute of Management and Sciences, Bengaluru | 0.00 | 50.00 | 12.50 | 62.50 |
| 15. | PES University, Bengaluru | 0.00 | 50.00 | 12.50 | 62.50 |
| 16. | Siddaganga Institute of Technology, Tumkuru | 0.00 | 50.00 | 12.50 | 62.50 |
| 17. | St. Aloysius College, Mangaluru | 0.00 | 50.00 | 12.50 | 62.50 |
| 18. | The Oxford College of Science, Bengaluru | 0.00 | 50.00 | 12.50 | 62.50 |
| | **Total** | **700.00** | **900.00** | **225.00** | **1825.00** |

Registrar
Yenepoya (Deemed to be University)
University Road, Deralakatte
Mangalore - 575 018

ATTESTED

Dr.Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

YENEPOYA



After admission to this course, Karnataka resident students selected from 18 host institutions will be eligible for a fellowship of Rs. 10,000 per month for 1st, 2nd and 3rd year and Rs. 15,000 per month for 4th and 5th year as per recommendation of selection committee.

Registrar
Yenepoya (Deemed to be University)
University Road, Deralakatte
Mangalore 575 018

ATTESTED

Dr.Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯದಲ್ಲಿ BTFS ಕಾರ್ಯಕ್ರಮದ ಪರಿಷ್ಕೃತ 2ನೇ ಆವೃತ್ತವಾದ ಜೈವಿಕ ತಂತ್ರಜ್ಞಾನ ಕೌಶಲ್ಯ ಉನ್ನತೀಕರಣ ಕಾರ್ಯಕ್ರಮ (BiSEP) ಅಡಿಯಲ್ಲಿ ಜೈವಿಕ ತಂತ್ರಜ್ಞಾನ ಕ್ಷೇತ್ರಾಭಿಮುಖ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮುಂದುವರಿಸುವ ಬಗ್ಗೆ.

ಓದಲಾಗಿದೆ:
1] ಸರ್ಕಾರಿ ಆದೇಶ ಸಂಖ್ಯೆ: ಐಟಿಬಿಡಿ 58 ಎಂಡಿಎ 2008, ದಿನಾಂಕ:18.07.2009.
2] ಸರ್ಕಾರಿ ಆದೇಶ ಸಂಖ್ಯೆ: ಐಟಿಬಿಡಿ [illegible] ಎಂಡಿಎ 2010, ದಿನಾಂಕ:04.12.2010.
3] ಸರ್ಕಾರಿ ಆದೇಶ ಸಂಖ್ಯೆ: ಐಟಿಬಿಡಿ 10 ಎಂಡಿಎ 2016, ದಿನಾಂಕ:21.06.2016.
4] ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ರವರ ಪತ್ರ ಸಂಖ್ಯೆ: KBITS/02/BFC/2016-17/250 ದಿನಾಂಕ:09.02.2017.

***

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ:18-07-2009ರ ಆದೇಶದಲ್ಲಿ ಮಿಲೆನಿಯಂ ಬಯೋಟೆಕ್ ಪಾಲಿಸಿ-IIಯು ರಾಜ್ಯಾದ್ಯಂತ ಜೈವಿಕ ತಂತ್ರಜ್ಞಾನ ಫಿನಿಷಿಂಗ್ ಸ್ಕೂಲ್ (BTFS) ಗಳನ್ನು ಸ್ಥಾಪಿಸಲು ಉತ್ತೇಜನ ನೀಡಿತು. ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ:04.12.2010ರನ್ವಯ ಐದು ವರ್ಷಗಳ ಅವಧಿಗೆ [2011-2016] ರಾಜ್ಯದ 12 ಶೈಕ್ಷಣಿಕ ಸಂಸ್ಥೆಗಳಲ್ಲಿ BTFS ಸ್ಥಾಪನೆಗೊಂಡಿತು. ಸದರಿ ಕಾರ್ಯಕ್ರಮವನ್ನು ಜೈವಿಕ ತಂತ್ರಜ್ಞಾನ ಕೌಶಲ್ಯ ಉನ್ನತೀಕರಣ ಕಾರ್ಯಕ್ರಮ [BiSEP] ಎಂದು ಮರುನಾಮಕರಣ ಮಾಡುವಂತೆ ಹಾಗೂ ಪದವಿದಾರರಿಗೆ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಇನ್ನೂ 5 (ಐದು) ವರ್ಷಗಳಿಗೆ ಜೈವಿಕ ತಂತ್ರಜ್ಞಾನ ಕ್ಷೇತ್ರಾಭಿಮುಖ ಕೌಶಲ್ಯಾಭಿವೃದ್ಧಿ ತರಬೇತಿ ಕಲ್ಪಿಸುವುದನ್ನು ಮುಂದುವರಿಸುತ್ತಾ, ಕರ್ನಾಟಕದಿಂದ ಬರುವ ವಿದ್ಯಾರ್ಥಿಗಳಿಗಾಗಿ ಶೇ.50ರಷ್ಟು ಮೀಸಲಾತಿ ಒದಗಿಸಲಾಗಿದೆ. ಸಾಮಾಜಿಕವಾಗಿ, ಭೌಗೋಳಿಕವಾಗಿ ಹಿಂದುಳಿದವರುಗಳು ಸಮನಾಗಿ ಪ್ರಯೋಜನ ಪಡೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು SC/ST ವರ್ಗದವರಿಗೆ ಹಾಗೂ ಹೈದರಾಬಾದ್-ಕರ್ನಾಟಕ ಪ್ರದೇಶದವರಿಗೆ ಮೀಸಲಾತಿಯನ್ನು ಕಲ್ಪಿಸಲಾಗುವುದು. ಅಗತ್ಯವಿದ್ದಲ್ಲಿ, ಮಹಿಳೆಯರಿಗೂ ಮೀಸಲಾತಿಯನ್ನು ಕಲ್ಪಿಸಲಾಗುವುದು.

2] BiSEP ಅಡಿಯಲ್ಲಿ, ಈಗಾಗಲೇ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ:21-06-2016ರ ಆದೇಶದನ್ವಯ ರಚಿಸಲಾಗಿರುವ BiSEP ಆಯ್ಕೆ ಸಮಿತಿಯಿಂದ ಆಯ್ಕೆಗೊಳಗಾಗಿರುವ, ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ 18 BiSEP ಹೊಂದಿದ ಸಂಸ್ಥೆಗಳಲ್ಲಿ- ಬಯೋ-ಥೆರಾಪ್ಯುಟಿಕ್ಸ್ / ಫಾರ್ಮಾಸ್ಯೂಟಿಕಲ್ ಉತ್ಪನ್ನ ಅಭಿವೃದ್ಧಿ; ಬೆಳೆ ತಳಿಶಾಸ್ತ್ರ ಮತ್ತು ಬೀಜ ತಂತ್ರಜ್ಞಾನ; ಮಲ್ಟಿಯೋಮಿಕ್ಸ್ ತಂತ್ರಜ್ಞಾನ; ಬಯೋಇನ್ಫೋರ್ಮ್ಯಾಟಿಕ್ಸ್ ಮತ್ತು ರ್‍ಯಾಷನಲ್ ಡ್ರಗ್ ಡಿಸೈನ್; ಸೆಲ್ಯುಲಾರ್ ಮತ್ತು ಮಾಲಿಕ್ಯುಲಾರ್ ಡಯಾಗ್ನಾಸ್ಟಿಕ್ಸ್; ಫರ್ಮೆಂಟೇಷನ್ ಮತ್ತು

ATTESTED
Dr Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore 575 018, Karnataka

ಬಯೋಪ್ರಾಸೆಸಿಂಗ್; ಫರ್ಮೆಂಟೇಷನ್ ಮತ್ತು ಮೈಕ್ರೋಬಿಯಲ್ ತಂತ್ರಜ್ಞಾನ; ನ್ಯೂಟ್ರಾಸ್ಯೂಟಿಕಲ್ಸ್ ಮತ್ತು ಆಹಾರ ಸಂಸ್ಕರಣೆ; ಕ್ಲಿನಿಕಲ್ ಸಂಶೋಧನೆ ಮತ್ತು ದತ್ತಾಂಶ ನಿರ್ವಹಣೆ; ಪ್ರೋಟೀನ್ ಎಕ್ಸ್‌ಪ್ರೆಷನ್ ಮತ್ತು ಸ್ಕೇಲ್‌ಅಪ್ ಮತ್ತಿತರ ಮುಂಚೂಣಿ ವಲಯಗಳೇ ಮೊದಲಾದ ಜೈವಿಕ ತಂತ್ರಜ್ಞಾನ ಮತ್ತು ಜೀವವಿಜ್ಞಾನ ಶಾಸ್ತ್ರಗಳ ವಿಶಿಷ್ಟ ವಲಯಗಳಲ್ಲಿ ನಿರ್ದಿಷ್ಟ ಉದ್ಯಮಮುಖೀ ಕೌಶಲ್ಯಗಳನ್ನು ಒದಗಿಸಲು ಪ್ರಸ್ತಾವಿಸಲಾಗಿದೆ:-

**ಕೋಷ್ಟಕ : 1**

| ಕ್ರ.ಸಂ. | ವಿಶ್ವವಿದ್ಯಾನಿಲಯ/ ಶೈಕ್ಷಣಿಕ ಸಂಸ್ಥೆಯ ಹೆಸರು | ಸ್ಥಳ |
|---|---|---|
| 1 | Gulbarga University | ಕಲ್ಬುರ್ಗಿ |
| 2 | J.S.S. College of Arts, Science & Commerce | ಮೈಸೂರು |
| 3 | Manipal University | ಮಣಿಪಾಲ |
| 4 | Siddaganga Institute of Technology | ತುಮಕೂರು |
| 5 | St. Aloysius College | ಮಂಗಳೂರು |
| 6 | Dayananda Sagar College of Engineering | ಬೆಂಗಳೂರು |
| 7 | Maharani Lakshmi Ammanni College for Women | ಬೆಂಗಳೂರು |
| 8 | Padmashree Institute of Management & Sciences | ಬೆಂಗಳೂರು |
| 9 | PES University | ಬೆಂಗಳೂರು |
| 10 | The Oxford College of Science | ಧಾರವಾಡ |
| 11 | SDM College of Medical Sciences & Hospital | ಧಾರವಾಡ |
| 12 | Shri Dharmasthala Manjunatheshwara College | ಉಜಿರೆ, ದ.ಕ. |
| 13 | University of Agricultural Sciences | ಧಾರವಾಡ |
| 14 | Yenepoya University | ಮಂಗಳೂರು |
| 15 | M.S. Ramaiah Institute of Technology | ಬೆಂಗಳೂರು |
| 16 | Mount Carmel College | ಬೆಂಗಳೂರು |
| 17 | Basaveshwara Engineering College | ಬಾಗಲಕೋಟೆ |
| 18 | KLE's B.V. Bhoomraddi College of Engineering & Tech. | ಹುಬ್ಬಳ್ಳಿ |

(ಷರಾ: ಕ್ರ.ಸಂ.1 ರಿಂದ 10 BTFS ಕಾರ್ಯಕ್ರಮದಡಿ ಇದ್ದಂತಹವುಗಳು)

3] ಕಾರ್ಯಕ್ರಮದ ಮೇಲೆ ಮರುಗಮನ ಹರಿಸಲಾಗಿ ಕೇವಲ ಉದ್ಯಮ ನಿರ್ದಿಷ್ಟ ಕೌಶಲ್ಯಗಳನ್ನು ನೀಡಿ ತರಬೇತಿ ಹೊಂದಿದ ಮಾನವಶಕ್ತಿಯನ್ನು ಪೂರೈಸಿ ಉದ್ಯಮದ ಅಗತ್ಯಗಳನ್ನು ಪೂರೈಸುವುದಷ್ಟೇ ಆಗಿರದೆ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ, ಜೈವಿಕ ತಂತ್ರಜ್ಞಾನದ ವಿವಿಧ ವಲಯಗಳಲ್ಲಿ ಉದ್ಯಮಶೀಲತೆಯನ್ನು ಪೋಷಿಸಿ ರಾಜ್ಯದೊಳಗೇ ನವೋದ್ಯಮ ಪರ್ಯಾವರಣ ವ್ಯವಸ್ಥೆಯ ವೇಗ ವರ್ಧಿಸುವುದಾಗಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯ BiSEP ಸಲಹಾ ಸಮಿತಿಯನ್ನು ಹಾಗೂ ಇಲಾಖೆಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ನಿರ್ದೇಶಕರ ಅಧ್ಯಕ್ಷತೆಯ ಮಾನಿಟರಿಂಗ್-ಮತ್ತು-ಸ್ಟೀರಿಂಗ್ ಸಮಿತಿಯನ್ನು ರಚಿಸಿ ರಾಜ್ಯದಲ್ಲಿ BiSEP ಕಾರ್ಯಕ್ರಮದ ಅನುಷ್ಠಾನದ ಪ್ರಗತಿಯನ್ನು ಉಸ್ತುವಾರಿ ಮಾಡಿ ಪುನರಾವಲೋಕಿಸುವಂತೆ ಪ್ರಸ್ತಾಪಿಸಿದೆ.

ATTESTED
Dr. Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

4] ಐದು (05) ವರ್ಷಗಳ ಅವಧಿಗಾಗಿ ಒಟ್ಟು ಅಂದಾಜು ವೆಚ್ಚ ರೂ.44.17 ಕೋಟಿಗಳನ್ನು (ನಲವತ್ತಾಲ್ಕು ಕೋಟಿ ಹದಿನೇಳು ಲಕ್ಷ ರೂಪಾಯಿಗಳು ಮಾತ್ರ) ಒಳಗೊಂಡಿದ್ದು, ಈ ಕೆಳಗಿನ ಕೋಷ್ಟಕಗಳಂತಿರುತ್ತದೆ :-

**ಕೋಷ್ಟಕ : 2**

| ಅ. ಪುನರಾವರ್ತಿತಗೊಳ್ಳದ ವೆಚ್ಚ (Non Recurring cost) | | | | | | | | (ರೂ. ಕೋಟಿಗಳಲ್ಲಿ) |
|---|---|---|---|---|---|---|---|---|
| ಕ್ರ. ಸಂ. | ಅಂಶ | 1ನೇ ವರ್ಷ | 2ನೇ ವರ್ಷ | 3ನೇ ವರ್ಷ | 4ನೇ ವರ್ಷ | 5ನೇ ವರ್ಷ | ಒಟ್ಟು | ಷರಾ |
| 1 | ಉಪಕರಣಗಳು: ಹೊಸ ಅತಿಥೇಯ ಸಂಸ್ಥೆಗಳಿಗೆ, ಸಂಸ್ಥೆಯೊಂದಕ್ಕೆ ರೂ.1 ಕೋಟಿಯಂತೆ ಗರಿಷ್ಠ 7 ಹೊಸ ಸಂಸ್ಥೆಗಳಿಗೆ. | 7.00 | 0.00 | 0.00 | 0.00 | 0.00 | 7.00 | ರಾಜ್ಯ ಸರ್ಕಾರವು ಭರಿಸಲಿದೆ. |
| ಆ. ಪುನರಾವರ್ತಿತ ವೆಚ್ಚಗಳು (Recurring cost) | | | | | | | | |
| 1 | **ಫೆಲೋಷಿಪ್**– 18 ಅತಿಥೇಯ ಸಂಸ್ಥೆಗಳಿಗೆ, ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ ರೂ.10,000/-ದಂತೆ ಒಟ್ಟು 360 ವಿದ್ಯಾರ್ಥಿಗಳಿಗೆ. 4ನೇ ಮತ್ತು 5ನೇ ವರ್ಷದ ನಂತರದಿಂದ 18 ಅತಿಥೇಯ ಸಂಸ್ಥೆಗಳಿಗೆ ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ ರೂ.15,000/-ರಂತೆ ಫೆಲೋಷಿಪ್. | 4.32 | 4.32 | 4.32 | 6.48 | 6.48 | 25.92 | ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯು ಬಾಕಿಯಿರುವ ಅನುಮೋದನೆಯ ಶೇ.50ರಷ್ಟನ್ನು ಭರಿಸಬೇಕಾಗುತ್ತದೆ. ರಾಜ್ಯ ಸರ್ಕಾರವು ಶೇ.50ರಷ್ಟನ್ನು ಭರಿಸಲಿದೆ. |
| 2 | ಪ್ರತೀ ಸಂಸ್ಥೆಗೆ ಮ್ಯಾನ್ ಪವರ್ / ಕನ್ಸ್ಯೂಮಬಲ್ಸ್/ಕಂಟಿಜೆನ್ಸಿ: ಶಿಕ್ಷಕರೊಬ್ಬರಿಗೆ ವರ್ಷಕ್ಕೆ ರೂ.6,00,000/-ದಂತೆ ಸಂಭಾವನೆ (ಪ್ರತಿ ಮಾಹೆ ರೂ.50,000/- ಕನ್‌ಸಾಲಿಡೇಟೆಡ್) ಹಾಗೂ ಗ್ಲಾಸ್‌ವೇರ್, ಕೆಮಿಕಲ್ಸ್, ಕಿಟ್ಸ್, ಉಪಕರಣದ ಬಿಡಿಭಾಗಗಳು ಇತ್ಯಾದಿ ಕನ್ಸ್ಯೂಮಬಲ್‌ಗಳಿಗೆ ವರ್ಷಕ್ಕೆ ರೂ.3,50,000/- ಮತ್ತು ಸಾರಿಗೆ, ವಿಸಿಟಿಂಗ್ ಫ್ಯಾಕಲ್ಟಿ/ಕ್ಷೇತ್ರ ಪರಿಣತರು ಮುಂತಾದವರುಗಳಿಗೆ ಕಂಟಿಜೆನ್ಸಿಗಾಗಿ ರೂ. 50,000/-. | 1.80 | 1.80 | 1.80 | 1.80 | 1.80 | 9.00 | ರಾಜ್ಯ ಸರ್ಕಾರವು ಭರಿಸಲಿದೆ. |
| 3 | ರಾಜ್ಯ ಸರ್ಕಾರದಿಂದ ವಿದ್ಯಾರ್ಥಿ ಶುಲ್ಕಕ್ಕೆ (ಟ್ಯೂಷನ್) ಬೆಂಬಲ: ಒಬ್ಬ ವಿದ್ಯಾರ್ಥಿಗೆ ವರ್ಷಕ್ಕೆ ರೂ.25,000/-ರಂತೆ 180 ಸೀಟುಗಳಿಗೆ, ಹೀಗೆ 18 ಅತಿಥೇಯ ಸಂಸ್ಥೆಗಳಿಗೆ. | 0.45 | 0.45 | 0.45 | 0.45 | 0.45 | 2.25 | ರಾಜ್ಯ ಸರ್ಕಾರವು ಭರಿಸಬೇಕಿದೆ. |
| | ಒಟ್ಟು (ಅ + ಆ) | 13.57 | 6.57 | 6.57 | 8.73 | 8.73 | 44.17 | |

**ಕೋಷ್ಟಕ : 3**

| | |
|---|---|
| ರಾಜ್ಯ ಸರ್ಕಾರದ ನೀಡಿಕೆ | 31.21 ಕೋಟಿಗಳು |
| ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯ ನೀಡಿಕೆ | 12.96 ಕೋಟಿಗಳು |
| ಒಟ್ಟು | 44.17 ಕೋಟಿಗಳು |

ATTESTED
Dr.Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

5] ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸರ್ಕಾರದ ಅಂದಿನ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯು ದಿ:31.01.2017ರಂದು ಸಭೆ ಸೇರಿ, (1) ಆಯ್ದ 07 [ಏಳು] ಸಂಸ್ಥೆಗಳಿಗೆ ರೂ.100.00 ಲಕ್ಷಗಳ ಒಂದು ಬಾರಿಯ Non Recurring ಅನುದಾನ, (08ನೇ ಸಂಸ್ಥೆಯಾದ ಧಾರವಾಡದ ಕೃಷಿ ವಿಶ್ವವಿದ್ಯಾಲಯಕ್ಕೆ ರೂ.100.00 ಲಕ್ಷಗಳ ಅನುದಾನವು ದೊರಕುವುದಿಲ್ಲ), (2) ಎಲ್ಲಾ 18 [ಹದಿನೆಂಟು] ಸಂಸ್ಥೆಗಳಿಗೂ 05 ವರ್ಷಗಳ ಅವಧಿಗೆ ಪ್ರತಿವರ್ಷಕ್ಕೆ ಸಂಸ್ಥೆಯೊಂದಕ್ಕೆ ರೂ.10.00 ಲಕ್ಷದ Recurring ವೆಚ್ಚಗಳ ಅನುದಾನ, ಹಾಗೂ (3) ಗರಿಷ್ಠ ಕೋರ್ಸ್ ಶುಲ್ಕವಾದ ರೂ.50,000/-ದ ಶೇ.50ರಷ್ಟನ್ನು ನಿಗದಿಪಡಿಸಿ, ಅಂದರೆ 18 [ಹದಿನೆಂಟು] ಸಂಸ್ಥೆಗಳಲ್ಲಿ ಪ್ರತಿಯೊಂದಕ್ಕೂ ನಿಗದಿಪಡಿಸಿದ ಕರ್ನಾಟಕ ನಿವಾಸಿ 20 ವಿದ್ಯಾರ್ಥಿಗಳಲ್ಲಿ ಗರಿಷ್ಠ 10 [ಹತ್ತು] ವಿದ್ಯಾರ್ಥಿಗಳಿಗೆ, ಒಬ್ಬ ವಿದ್ಯಾರ್ಥಿಗೆ ರೂ.25,000/-ರಂತೆ ಇವುಗಳನ್ನು ಒದಗಿಸುವಂತೆ ಶಿಫಾರಸ್ಸು ಮಾಡಿದ್ದು, ಈ ಕೆಳಗಿನಂತೆ ಸಲ್ಲಿಸಿರುತ್ತಾರೆ:-

**ಕೋಷ್ಟಕ-4**

| ಕ್ರ. ಸಂ. | ವಿಶ್ವವಿದ್ಯಾನಿಲಯ/ಸಂಸ್ಥೆಯ ಹೆಸರು | ಪುನರಾವರ್ತನೆಯಾಗದ ಉಪಕರಣಗಳಿಗಾಗಿನ ಅನುದಾನ (ರೂ. ಲಕ್ಷಗಳಲ್ಲಿ) | ವರ್ಷಕ್ಕೆ ರೂ.10 ಲಕ್ಷದಂತೆ 5 ವರ್ಷಗಳಿಗೆ ಪುನರಾವರ್ತಿತ ವೆಚ್ಚದ ಅನುದಾನ | ವರ್ಷಕ್ಕೆ ಒಬ್ಬ ವಿದ್ಯಾರ್ಥಿಗೆ ರೂ.25,000/-ರಂತೆ ಗರಿಷ್ಠ 10 ವಿದ್ಯಾರ್ಥಿಗಳಿಗೆ ಕೋರ್ಸು ಶುಲ್ಕದ ಶೇ.50ರಷ್ಟು. | ಒಟ್ಟು (ಲಕ್ಷ ರೂ.ಗಳಲ್ಲಿ) |
|---|---|---|---|---|---|
| | | 1ನೇ ವರ್ಷ | 1ರಿಂದ 5ನೇ ವರ್ಷದವರೆಗೆ | 1ರಿಂದ 5ನೇ ವರ್ಷದವರೆಗೆ | |
| 1 | Basaveshwara Engineering College, Bagalkot | 100.00 | 50.00 | 12.50 | 162.50 |
| 2 | KLE's B.V. Bhoomraddi College of Engineering & Technology, Hubballi | 100.00 | 50.00 | 12.50 | 162.50 |
| 3 | M.S. Ramaiah Institute of Technology, Bengaluru | 100.00 | 50.00 | 12.50 | 162.50 |
| 4 | Mount Carmel College, Bengaluru | 100.00 | 50.00 | 12.50 | 162.50 |
| 5 | SDM College of Medical Sciences and Hospital, Dharwad | 100.00 | 50.00 | 12.50 | 162.50 |
| 6 | Shri Dharmasthala Manjunathe shwara College, Ujire, D.K | 100.00 | 50.00 | 12.50 | 162.50 |
| 7 | Yenepoya University, Mangaluru | 100.00 | 50.00 | 12.50 | 162.50 |
| 8 | Institute of Agriculture Biotechnology, University of Agricultural Sciences, Dharwad | 0.00 | 50.00 | 12.50 | 62.50 |
| 9 | Dayananda Sagar College of Engineering, Bengaluru | 0.00 | 50.00 | 12.50 | 62.50 |
| 10 | Gulbarga University, Kalaburgi | 0.00 | 50.00 | 12.50 | 62.50 |
| 11 | J.S.S. College of Arts, Science & Commerce, Mysuru | 0.00 | 50.00 | 12.50 | 62.50 |

ATTESTED
Dr.Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

| 12 | Maharani Lakshmi Ammanni College for Women, Bengaluru | 0.00 | 50.00 | 12.50 | 62.50 |
|---|---|---|---|---|---|
| 13 | School of Life Sciences, Manipal University, Manipal, Udupi | 0.00 | 50.00 | 12.50 | 62.50 |
| 14 | Padmashree Institute of Management & Sciences, Bengaluru | 0.00 | 50.00 | 12.50 | 62.50 |
| 15 | PES University, Bengaluru | 0.00 | 50.00 | 12.50 | 62.50 |
| 16 | Siddaganga Institute of Technology, Tumkuru | 0.00 | 50.00 | 12.50 | 62.50 |
| 17 | St. Aloysius College, Mangaluru | 0.00 | 50.00 | 12.50 | 62.50 |
| 18 | The Oxford College of Science, Bengaluru | 0.00 | 50.00 | 12.50 | 62.50 |
| | ಒಟ್ಟು | **700.00** | **900.00** | **225.00** | **1825.00** |

6] ಕೋರ್ಸ್‌ಗೆ ಸೇರಲು 18 ಅತಿಥೇಯ ಸಂಸ್ಥೆಗಳಲ್ಲಿ ಆಯ್ಕೆಗೊಂಡಿರುವ ಕರ್ನಾಟಕ ನಿವಾಸೀ ವಿದ್ಯಾರ್ಥಿಗಳಿಗೆ 1ನೇ, 2ನೇ ಮತ್ತು 3ನೇ ವರ್ಷಗಳಂದು ಒಬ್ಬ ವಿದ್ಯಾರ್ಥಿಗೆ ರೂ.10,000/-ರಂತೆ ಹಾಗೂ 4ನೇ ಮತ್ತು 5ನೇ ವರ್ಷಗಳಲ್ಲಿ ಒಬ್ಬ ವಿದ್ಯಾರ್ಥಿಗೆ ರೂ.15,000/-ರಂತೆ ವಿದ್ಯಾರ್ಥಿ ಫೆಲೋಷಿಪ್ ಪಾವತಿಗಾಗಿಯೂ ಸಹ ಆಯ್ಕೆ ಸಮಿತಿಯು ಶಿಫಾರಸ್ಸು ಮಾಡಿದೆ.

**ಕೋಷ್ಟಕ : 5** (ಲಕ್ಷ ರೂ.ಗಳಲ್ಲಿ)

| ವಿವರಣೆ | 1ನೇ ವರ್ಷ | 2ನೇ ವರ್ಷ | 3ನೇ ವರ್ಷ | 4ನೇ ವರ್ಷ | 5ನೇ ವರ್ಷ | ಒಟ್ಟು |
|---|---|---|---|---|---|---|
| ವಿದ್ಯಾರ್ಥಿಗಳ ಫೆಲೋಶಿಪ್ ಮೊತ್ತ | 216.00 | 216.00 | 216.00 | 324.00 | 324.00 | 1296.00 |

7] ಇತರೆ ರಾಜ್ಯಗಳಿಂದ ಬರುವ ವಿದ್ಯಾರ್ಥಿಗಳಿಗೆ ನೀಡಲಾಗುವ ವಿದ್ಯಾರ್ಥಿ ಫೆಲೋಷಿಪ್ ಮೊತ್ತವನ್ನು ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯು ಭರಿಸುವಂತೆ ಕೋರಲಾಗಿದೆ. ಕೇಂದ್ರದ ಜೈವಿಕ ತಂತ್ರಜ್ಞಾನ ಇಲಾಖೆಯಿಂದ ಈ ವಿಷಯಕ್ಕೆ ಪ್ರತಿಕ್ರಿಯಿಸುವಲ್ಲಿ ವಿಳಂಬವಾಗುತ್ತಿದೆ. ವಿದ್ಯಾರ್ಥಿ ಫೆಲೋಷಿಪ್ ಮೊತ್ತದ ಶೇಕಡಾ 50ರಷ್ಟು ವೆಚ್ಚವನ್ನು ಭರಿಸಲು ಜೈವಿಕ ತಂತ್ರಜ್ಞಾನ ಇಲಾಖೆಯು ಒಂದು ವೇಳೆ ನಿರಾಕರಿಸಿದರೂ ಸಹ, ಮುಂದುವರಿದು ಕಾರ್ಯಕ್ರಮವನ್ನು ಪ್ರಾರಂಭಿಸುವುದೆಂದು ಪ್ರಸ್ತಾವಿಸಲಾಗಿದೆ. ಅಂತಹ ಪ್ರಸಂಗದಲ್ಲಿ, ಕರ್ನಾಟಕದ ವಿದ್ಯಾರ್ಥಿಗಳಿಗೆ ಮಾತ್ರವೇ ಕರ್ನಾಟಕ ಸರ್ಕಾರದಿಂದ ವಿದ್ಯಾರ್ಥಿ ಫೆಲೋಷಿಪ್ ವೇತನವನ್ನು ನೀಡಲಾಗುವುದು.

8] BiSEP ಕಾರ್ಯಕ್ರಮಕ್ಕಾಗಿ ರಾಜ್ಯ ಸರ್ಕಾರದ ಒಟ್ಟು ಬದ್ಧತೆಯು 5 ವರ್ಷಗಳ ಅವಧಿಯಲ್ಲಿ ಈ ಕೆಳಗಿನಂತಿದೆ:-

**ಕೋಷ್ಟಕ : 6**

| ವರ್ಷ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|
| 1ನೇ ವರ್ಷ | 1141.00 |
| 2ನೇ ವರ್ಷ | 441.00 |
| 3ನೇ ವರ್ಷ | 441.00 |
| 4ನೇ ವರ್ಷ | 549.00 |
| 5ನೇ ವರ್ಷ | 549.00 |
| **ಒಟ್ಟು** | **3121.00** |

ATTESTED
Dr.Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

9] 1ನೇ ವರ್ಷದ ಕಾರ್ಯಕ್ರಮ ವೆಚ್ಚಕ್ಕಾಗಿ ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯ ಬೆಂಬಲವು ಬಾಕಿಯಿರುವಂತೆಯೇ ಇಲಾಖೆಯು ಈಗಾಗಲೇ ಆಯವ್ಯಯದಲ್ಲಿ ಒದಗಿಸಲಾಗಿದೆ.

| | | |
|---|---|---|
| ಆರ್ಥಿಕ ವರ್ಷ 2016-17 ಆಯವ್ಯಯ ಹಂಚಿಕೆ | : | ರೂ.500 ಲಕ್ಷಗಳು |
| (ಲೆಕ್ಕ ಶೀರ್ಷಿಕೆ 5465-01-190-1-09-059- ಓಇ ಯೋಜನೆ ಬಿಟಿ ಪಾರ್ಕ್-ಆವ2015-16 ಮತ್ತು 3451-00-090-2-24-059-ಓಇ ಯೋಜನೆ ಬಿಟಿ ಪಾಲಿಸಿ-ಆವ2016-17) ಗಳಿಂದ ಮೊತ್ತದ ಮುನರ್‌ವಿನಿಯೋಗ | : | ರೂ.500 ಲಕ್ಷಗಳು |
| ಆರ್ಥಿಕ ವರ್ಷ 2017-18ರ ಆಯವ್ಯಯ ಹಂಚಿಕೆ | : | ರೂ.400 ಲಕ್ಷಗಳು |
| **ಒಟ್ಟು** | : | **ರೂ.1400 ಲಕ್ಷಗಳು** |

10] ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ದಿನಾಂಕ:09.02.2017ರ ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ರವರ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 02 ಎಂಡಿಎ 2017, ಬೆಂಗಳೂರು; ದಿನಾಂಕ: 28.07.2017**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯಾದ್ಯಂತ ಜೈವಿಕ ತಂತ್ರಜ್ಞಾನ ಕೌಶಲ್ಯ ಉನ್ನತೀಕರಣ ಕಾರ್ಯಕ್ರಮವನ್ನು 05 (ಐದು) ವರ್ಷಗಳ ಅವಧಿಗೆ ರೂ.44.17 ಕೋಟಿ (ನಲವತ್ನಾಲ್ಕು ಕೋಟಿ ಹದಿನೇಳು ಲಕ್ಷ ರೂಪಾಯಿಗಳು ಮಾತ್ರ) ಗಳ (ಭಾರತ ಸರ್ಕಾರದ ನೀಡಿಕೆಯೂ ಸೇರಿ) ಒಟ್ಟಾರೆ ಆಯವ್ಯಯದಲ್ಲಿ ಕರ್ನಾಟಕ ಸರ್ಕಾರದ ನೀಡಿಕೆಯು (ಪ್ರಸ್ತಾವನೆಯ ಕೋಷ್ಟಕ:6ಲ್ಲಿ ಕಾಣಿಸಿದೆ) ರೂ.31.21 ಕೋಟಿಗಳಂತೆ (ಮುವತ್ತೊಂದು ಕೋಟಿ ಇಪ್ಪತ್ತೊಂದು ಲಕ್ಷ ರೂಪಾಯಿಗಳು ಮಾತ್ರ) ಅನುಷ್ಠಾನಗೊಳಿಸುವ ಸಲುವಾಗಿ ಸರ್ಕಾರವು ಅನುಮೋದಿಸಿರುತ್ತದೆ.

2] ರಾಜ್ಯ ಸರ್ಕಾರದ ಬೆಂಬಲದೊಂದಿಗೆ ಜೈವಿಕ ತಂತ್ರಜ್ಞಾನ ಕೌಶಲ್ಯ ಉನ್ನತೀಕರಣ ಕಾರ್ಯಕ್ರಮಗಳನ್ನು ಈ ಕೆಳಗಿನ 18 ಸಂಸ್ಥೆಗಳಲ್ಲಿ ಸ್ಥಾಪಿಸಲು ಅನುಬಂಧದಲ್ಲಿ ತಿಳಿಸಿರುವ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ :-

| | | | |
|---|---|---|---|
| 1. | Basaveshwara Engineering College, Bagalkot | 10. | Gulbarga University, Kalaburgi |
| 2. | KLE's B.V. Bhoomraddi College of Engineering & Technology, Hubballi | 11. | J.S.S. College of Arts, Science & Commerce, Mysuru |
| 3. | M.S. Ramaiah Institute of Technology, Bengaluru | 12. | Maharani Lakshmi Ammanni College for Women, Bengaluru |
| 4. | Mount Carmel College, Bengaluru | 13. | School of Life Sciences, Manipal University, Manipal, Udupi |
| 5. | SDM College of Medical Sciences and Hospital, Dharwad | 14. | Padmashree Institute of Management & Sciences, Bengaluru |
| 6. | Shri Dharmasthala Manjunatheshwara College, Ujire, D.K | 15. | PES University, Bengaluru |
| 7. | Yenepoya University, Mangaluru | 16. | Siddaganga Institute of Technology, Tumkuru |
| 8. | Institute of Agriculture Biotechnology, University of Agricultural Sciences, Dharwad | 17. | St. Aloysius College, Mangaluru |
| 9. | Dayananda Sagar College of Engineering, Bengaluru | 18. | The Oxford College of Science, Bengaluru |

ATTESTED
Dr.Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

3] ಪ್ರಸ್ತಾವನೆಯ ಕೋಷ್ಟಕ:5ರಲ್ಲಿ ಕಾಣಿಸಿರುವಂತೆ ಕರ್ನಾಟಕ ನಿವಾಸೀ ವಿದ್ಯಾರ್ಥಿಗಳಿಗೆ ಫೆಲೋಷಿಪ್ ವೇತನದ ಮೊತ್ತದ ಪಾವತಿಗೆ ಅನುಮೋದನೆ ನೀಡಲಾಗಿದೆ.

4] ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 10 ಎಂಡಿಎ 2016, ಬೆಂಗಳೂರು, ದಿನಾಂಕ:21-06-2016ರನ್ವಯ ರಚಿಸಲಾಗಿರುವ ಜೈವಿಕ ತಂತ್ರಜ್ಞಾನ ಕೌಶಲ್ಯ ಉನ್ನತೀಕರಣ ಕಾರ್ಯಕ್ರಮದ ಆಯ್ಕೆ ಸಮಿತಿಯ ಎಲ್ಲಾ ಸದಸ್ಯರುಗಳನ್ನೇ ಜೈವಿಕ ತಂತ್ರಜ್ಞಾನ ಕೌಶಲ್ಯ ಉನ್ನತೀಕರಣ ಕಾರ್ಯಕ್ರಮದ ಸಲಹಾ ಸಮಿತಿಯಾಗಿರಲು ಅನುಮೋದನೆ ನೀಡಲಾಗಿದೆ. ಕಾರ್ಯಕ್ರಮದ ಪುನರಾವಲೋಕನ ಮತ್ತು ಅನುಷ್ಠಾನಕ್ಕಾಗಿ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇವರ ಅಧ್ಯಕ್ಷತೆಯಲ್ಲಿ ಮಾನಿಟರಿಂಗ್-ಮತ್ತು-ಸ್ಟೀರಿಂಗ್ ಕಮಿಟಿಯ ರಚನೆಗಾಗಿ ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ ತಗಲುವ ವೆಚ್ಚವನ್ನು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಮುಖಾಂತರ ಕೆಬಿಟ್ಸ್ ಸಂಸ್ಥೆಗೆ ಬಿಡುಗಡೆಗೊಳಿಸುವುದು.

6] ಈ ಆದೇಶವನ್ನು ಟಿಪ್ಪಣಿ ಸಂಖ್ಯೆ: ಎಸಿಎಸ್ 2392 ಎಫ್‌ಡಿ/2017 ದಿನಾಂಕ:09.05.2017ರನ್ವಯ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಹಾಗೂ ವಿಷಯ ಪ್ರಕರಣ ಸಂಖ್ಯೆ:437/2017 ದಿನಾಂಕ:05.07.2017ರನ್ವಯ ರಾಜ್ಯ ಸಚಿವ ಸಂಪುಟದ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

28/7

(ಸಿದ್ರಾಮಪ್ಪ ಹ ತಳವಾರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಇವರಿಗೆ:-

1. ಮಹಾಲೇಖಪಾಲರು (ಲೆಕ್ಕಪತ್ರ 1 ಮತ್ತು 2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು (ಪ್ರಕರಣ ಸಂಖ್ಯೆ: 437/2017 ದಿನಾಂಕ:05.07.2017).
5. ನಿರ್ದೇಶಕರು, ಮಾತಂ, ಜೈತಂ ನಿರ್ದೇಶನಾಲಯ, ಶಾಂತಿನಗರ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್, ಶಾಂತಿನಗರ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್ ಸಂಸ್ಥೆ, ಶಾಂತಿನಗರ, ಬೆಂಗಳೂರು.
8. ಸಂಬಂಧಪಟ್ಟ ವಿಶ್ವವಿದ್ಯಾಲಯ / ಶೈಕ್ಷಣಿಕ ಸಂಸ್ಥೆಗಳಿಗೆ (ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ಮುಖಾಂತರ).
9. ಸಮಿತಿಯ ಸದಸ್ಯರುಗಳಿಗೆ (ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ಮುಖಾಂತರ).
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

****

ATTESTED
Dr.Gangadhara Somayaji K.S.
Registrar
Yenepoya(Deemed to be University)
University Road, Deralakatte
Mangalore- 575 018, Karnataka

## ಸಂಖ್ಯೆ ಐಟಿಡಿ 02 ಎಂಡಿಎ 2017, ಬೆಂಗಳೂರು, ದಿನಾಂಕ 28.07.2017ರ ಸರ್ಕಾರಿ ಆದೇಶದ ಅನುಬಂಧ

ವಿಶ್ವವಿದ್ಯಾನಿಲಯ / ಶೈಕ್ಷಣಿಕ ಸಂಸ್ಥೆಗಳಿಗೆ ನೀಡಲಾಗುವ ಮಾಡಲಾಗುವ ಪುನರಾವರ್ತನೆಗೊಳ್ಳದ, ಉಪಕರಣಗಳಿಗಾಗಿನ ಅನುದಾನ, ಪುನರಾವರ್ತನೆಗೊಳ್ಳುವ ಅನುದಾನ ಹಾಗೂ ವಿದ್ಯಾರ್ಥಿ ಕೋರ್ಸ್ ಶುಲ್ಕದ ಶೇಕಡಾ 50ರಷ್ಟರ ಮೊತ್ತಗಳನ್ನು ಬಿಡುಗಡೆ ಮಾಡಲು ಈ ಕೆಳಕಂಡ ನಿಬಂಧನೆಗಳು ಅನ್ವಯವಾಗುತ್ತವೆ:

ಅ) ಮಂಜೂರು ಮಾಡಲಾಗಿರುವ ಉದ್ದೇಶಕ್ಕಾಗಿ ಮಾತ್ರವೇ ವಿಶ್ವವಿದ್ಯಾನಿಲಯ/ ಶೈಕ್ಷಣಿಕ ಸಂಸ್ಥೆಗಳು ಅನುದಾನದ ಮೊತ್ತವನ್ನು ಬಳಸತಕ್ಕದ್ದು.

ಆ) ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕೆಜಿಟ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದನೆಗೊಂಡ ಪಟ್ಟಿಯ ಪ್ರಕಾರ ನೀಡಲಾಗುವ ಕೋರ್ಸಿಗೆ ಸಂಬಂಧಿಸಿದ ಅಗತ್ಯವಾದ ಉಪಕರಣಗಳು, ಪ್ರಯೋಗಾಲಯ ಸಲಕರಣೆಗಳು ಮತ್ತು ಸಂಬಂಧಿತ ಪರಿಕರಗಳನ್ನು ಸಂಸ್ಥೆಗಳು ಪ್ರಾರಂಭದಲ್ಲಿ, ಪುನರಾವರ್ತನೆಗೊಳ್ಳದ ಉಪಕರಣಗಳಿಗಾಗಿ ಒದಗಿಸಿರುವ ಅನುದಾನ ಬೆಂಬಲದಿಂದ ಸಂಗ್ರಹಿಸತಕ್ಕದ್ದು ಹಾಗೂ ಅಂತಹ ಸಂಗ್ರಹದ ವಿವರಗಳನ್ನು ಬಯಸಿದ ಸಂದರ್ಭಗಳಲ್ಲೆಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಕೆಜಿಟ್ಸ್ / ಮಂಜೂರು ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

ಇ) ಹಾಗೆ ಸಂಗ್ರಹಿಸಿದ ಉಪಕರಣಗಳು, ಪ್ರಯೋಗಾಲಯ ಸಲಕರಣೆಗಳು ಮತ್ತು ಸಂಬಂಧಿತ ಪರಿಕರಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕೆಜಿಟ್ಸ್ / ಮಂಜೂರು ಪ್ರಾಧಿಕಾರದಿಂದ ವಹಿಸಲಾದ ನಿರೀಕ್ಷಣಾ ತಂಡದ ನಿರೀಕ್ಷಣೆ (/ತಪಾಸಣೆ)ಗಾಗಿ ತೆರೆದಿಡತಕ್ಕದ್ದು. ನಿರೀಕ್ಷಣಾ ತಂಡವು ಅಂತಹ ನಿರೀಕ್ಷಣೆಯ ನಂತರ ಮಾರ್ಗಸೂಚಿಯನ್ವಯ ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಶಿಫಾರಸ್ಸು ಕೈಗೊಳ್ಳತಕ್ಕದ್ದು.

ಈ) ಸಂಗ್ರಹಿಸಿದ ಉಪಕರಣ ವಸ್ತುಗಳು ಸಾಮಾನ್ಯ ಆರ್ಥಿಕ ನಿಯಮಾವಳಿಯಲ್ಲಿ ನಿಗದಿ ಪಡಿಸಿರುವ ವಿಧಾನದನ್ವಯ ಸರಿಪಡಿಸಲಾಗದಂತವೆಂದು ಹಾಗಾಗಿ ನಿರುಪಯುಕ್ತವೆಂದು ಘೋಷಿಸಿದ ಹೊರತೂ, ವ್ಯವಸ್ಥಾಪಕ ನಿರ್ದೇಶಕರು, ಕೆಜಿಟ್ಸ್ /ಮಂಜೂರು ಪ್ರಾಧಿಕಾರದ ಪೂರ್ವಾನುಮೋದನೆಯಿಲ್ಲದೆ ತ್ಯಾಜ್ಯಗೊಳಿಸುವಂತಿಲ್ಲ.

ಉ) ಕಾಲಕಾಲಕ್ಕೆ ನಿಗದಿಗೊಳಿಸುವ ಬೆಂಬಲ ದಾಖಲೆಗಳಾದ ಭರ್ತಿ ಮಾಡಿದ ಪ್ರವೇಶ ಅರ್ಜಿಯ, ವಿದ್ಯಾರ್ಥಿ ಶುಲ್ಕ ಪಾವತಿ ರಸೀದಿ, ಅಂಕಪಟ್ಟಿಗಳ, ಇತ್ಯಾದಿಗಳ ಪ್ರತಿಗಳನ್ನು ಸಲ್ಲಿಸುವ ಷರತ್ತಿನೊಂದಿಗೆ ವಿದ್ಯಾರ್ಥಿ ಕೋರ್ಸು ಶುಲ್ಕದ ಶೇಕಡಾ 50ರಷ್ಟರ ಮೊತ್ತವನ್ನು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು.

ಊ) ಪಡೆದ ಅನುದಾನಕ್ಕೆ ಪ್ರತ್ಯೇಕವಾಗಿ ಲೆಕ್ಕಪರಿಶೋಧಿಸಿರುವ ಲೆಕ್ಕಪತ್ರಗಳನ್ನು ಎಲ್ಲಾ ಸಂಸ್ಥೆಗಳು ನಿರ್ವಹಿಸಿರಬೇಕು; ಅನುದಾನದ ಇಡೀ ಅಥವಾ ಭಾಗವನ್ನು ಬಡ್ಡಿ ಗಳಿಕೆಯಾಗುವ ಬ್ಯಾಂಕು ಖಾತೆಯೊಂದರಲ್ಲಿ ಇಡಬೇಕಾಗುವ ಅಗತ್ಯ ಬಿದ್ದಲ್ಲಿ, ಹಾಗೆ ಗಳಿಸಿದ ಬಡ್ಡಿ ಮೊತ್ತದ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಹಾಗೆ ಗಳಿಸಿದ ಬಡ್ಡಿಯನ್ನು ಸಂಸ್ಥೆಗೆ ಸೇರುವ ಆದಾಯ ಎಂದು ಪರಿಗಣಿಸಲಾಗಿ, ಅನುದಾನದ ಮುಂದಿನ ಕಂತಿನೆಡೆಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

ಋ) ಎಲ್ಲಾ ಸಂಸ್ಥೆಗಳು ಬಳಕೆ ಪ್ರಮಾಣ ಪತ್ರ ಹಾಗೂ ಅನುದಾನಕ್ಕೆ ಸಂಬಂಧಿಸಿದ ಪರಿಶೋಧಿತ ಲೆಕ್ಕಪತ್ರದ ಒಕ್ಕಣೆಯನ್ನು ಪ್ರತಿ ಆರ್ಥಿಕ ವರ್ಷ ಅಂತ್ಯಗೊಂಡ ಕೂಡಲೆ ಸಲ್ಲಿಸತಕ್ಕದ್ದು.

ಎ) ಅನುದಾನ ಪಡೆವ ಸಂಸ್ಥೆಗಳ ಲೆಕ್ಕಪತ್ರಗಳು ಮಂಜೂರು ಪ್ರಾಧಿಕಾರದ/ ಲೆಕ್ಕಪರಿಶೋಧನೆಗೆ ನಿರೀಕ್ಷಣೆ/ತಪಾಸಣೆಗಾಗಿ ಕರೆ ನೀಡಿದ ಯಾವುದೇ ಸಂದರ್ಭದಲ್ಲಿ ಸಂಸ್ಥೆಯು ಸಹಕರಿಸಬೇಕು.

ಏ) ಸಂಸ್ಥೆಗಳು ಕಾಲಕಾಲಕ್ಕೆ ರಾಜ್ಯ ಸರ್ಕಾರದ ಐಟಿ&ಬಿಟಿ ಇಲಾಖೆಯ ಕೆಜಿಟ್ಸ್ ಸಂಸ್ಥೆಯಿಂದ ನಿಗದಿಸಿದ ಎಲ್ಲಾ ನಿಯಮ, ನಿಯಮಾವಳಿ ಹಾಗೂ ಮಾರ್ಗಸೂಚಿಗಳನ್ನೂ ಅನುಸರಿಸಲು ಬದ್ಧವಾಗಿರತಕ್ಕದ್ದು.

(ಸಿದ್ರಾಮಪ್ಪ ಹ ತಳವಾರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ATTESTED
Dr.Gangadhara Somayaji K.S
Registrar
Yenepoya(Deemed to be Univers
University Road, Deralakatte
Mangalore- 575 018, Karn